ಆಡಳಿತಾಧಿಕಾರಿಯನ್ನು ಸರ್ಕಾರ ತಕ್ಷಣ ನೇಮಿಸಿ ಬ್ಯಾಂಕಿನ ಅವ್ಯವಹಾರಗಳನ್ನು ಮುಚ್ಚಿ ಹಾಕದಂತೆ ತಕ್ಷಣ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಹಕಾರ ಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು) : ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಹಾಸನ ಇದರಲ್ಲಿ ಅನೇಕ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರ ಈ ಬ್ಯಾಂಕಿನ ಮೇಲೆ ಹದಿನೈದು ಆರೋಪಗಳನ್ನು ಮಾಡಿ ದಿನಾಂಕ: 26-8-1991ರಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30ಎ ಇದರ ರೀತಿ ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ ಜಿಲ್ಲೆ, ಹಾಸನ ಇವರನ್ನು ಇತರೆ ಕೆಲಸಗಳ ಜೊತೆಗೆ ವಿಶೇಷ ಅಧಿಕಾರಿಯಾಗಿ ನೇಮಿಸಲಾಗಿದೆ. ಸಹಕಾರ ಸಂಘಗಳ ಉಪ ನಿಬಂಧಕರು ದಿನಾಂಕ : 28-8-1991ರ ಪೂರ್ವಾಹ್ನ ಬ್ಯಾಂಕಿನ ವ್ಯವಸ್ಥಾಪಕರ ಆಡಳಿತ ಮಂಡಳಿಯ ಪೂರ್ಣ ಪ್ರಭಾರವನ್ನು ವಹಿಸಿಕೊಂಡಿರುತ್ತಾರೆ. ಈ ಬ್ಯಾಂಕಿನಲ್ಲಿ ನಡೆದಿರುವ ಎಲ್ಲಾ ಅವ್ಯವಹಾರಗಳ ಸತ್ಯಾಸತ್ಯತೆಯನ್ನು ತಿಳಿಯಲು ಸಹಕಾರ ಸಂಘಗಳ ಕಾಯ್ದೆ ಕಲಂ 64ರ ರೀತಿ ವಿಚಾರಣೆಗೆ ಆದೇಶ ಮಾಡಲಾಗಿದೆ. ವಿಚಾರಣೆ ವರದಿ ಬಂದನಂತರ ತಪ್ಪಿತಸ್ಥರ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಪುಸ್ತಕಗಳನ್ನು ಬ್ಯಾಂಕಿನ ಜವಾಬ್ದಾರಿಯಲ್ಲಿರುತ್ತದೆ. ಹಿಂದಿನ ವ್ಯವಸ್ಥಾಪಕರನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಬ್ಯಾಂಕಿನ ಅಕೌಂಟೆಂಟ್‌ರವರನ್ನು ತಾತ್ಕಾಲಿಕವಾಗಿ ವ್ಯವಸ್ಥಾಪಕರನ್ನಾಗಿ ನೇಮಿಸಿದ್ದು ಅವರು ಹಿಂದಿನ ವ್ಯವಸ್ಥಾಪಕರಿಂದ ಎಲ್ಲಾ ಮುಖ್ಯವಾದ ದಾಖಲಾತಿಗಳನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಲೆಕ್ಕಪುಸ್ತಕಗಳನ್ನು ತಿದ್ದಲಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಈ ಬಗ್ಗೆ ಪರಿಶೀಲಿಸಿ ಅಂತಹದ್ದು ಏನಾದರೂ ನಡೆದಿದ್ದರೆ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಬ್ಯಾಂಕಿನ ಹಾಗೂ ಸದಸ್ಯರುಗಳ ಹಿತದೃಷ್ಟಿಯಿಂದ ಬ್ಯಾಂಕಿಗೆ ಒಬ್ಬ ಪೂರ್ಣಾವಧಿಯ ವ್ಯವಸ್ಥಾಪಕರನ್ನು ಸಹಕಾರ ಇಲಾಖೆ ವತಿಯಿಂದ ನೇಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

4) ಅನಧಿಕೃತ ರೆವಿನ್ಯೂ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿರುವುದನ್ನು ಸಕ್ರಮಗೊಳಿಸುವುದು.

SRI. SADATH ALIKHAN (Chennapatna) : The Hon'ble Minister for housing and Urban Development may please to note that:

Karnataka Housing Board has constructed the Houses for Employees of G.S.S. Mills Channapatna. The G.S.S. Mills has been undertaken by the Government from the Share holders the place of which the construction of Karnataka Housing Boarding are not included in the sale deed.

As per the G.O. No. HUD/IRSO 78 Dt. 21/24/9/79 accorded sanction to the disposal of these premises on lease cum sale basis to the existing occupants.

What action has been taken by the Government in this regard?

When it will be disposed of to the existing occupants as per Government order?

ಶ್ರೀ ಎಂ. ವೀರಪ್ಪಮೊಯಿಲಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಚಾರವನ್ನು ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ತಿಳಿಸುತ್ತೇನೆ.

5) ಮೈಸೂರಿನಲ್ಲಿ ನಾಯಕ ಮತ್ತು ನಾಯ್ಕ ಜನಾಂಗದವರಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ನಾಯಕ, ನಾಯ್ಕ ಜನಾಂಗದವರನ್ನು ಪರಿಶಿಷ್ಟ ವರ್ಗದವರೆಂದು ಆದೇಶ ಹೊರಡಿಸಿದ್ದರೂ ಸಹ ಮೈಸೂರು ಜಿಲ್ಲೆಯಲ್ಲಿ ನಾಯಕ, ನಾಯ್ಕ ಮುಂತಾದ ಜನಾಂಗದವರಿಗೆ ಪರಿಶಿಷ್ಟ ವರ್ಗದವರೆಂದು ಜಾತಿ ಪ್ರಮಾಣ ಪತ್ರವನ್ನು ನೀಡದಿರುವುದರಿಂದ ಉಂಟಾಗಿರುವ ತೊಂದರೆಯನ್ನು ಸರಿಪಡಿಸಿ ನಾಯಕ ಮತ್ತು ನಾಯ್ಕ ಜನಾಂಗದವರಿಗೆ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಕೋರುತ್ತೇನೆ.

ಹಾಗೂ ಬೇಡ ಜನಾಂಗದ ಪರ್ಯಾಯ ಜಾತಿಯಾದ ಪರಿವಾರ ಜನಾಂಗದವರಿಗೆ ಪರಿಶಿಷ್ಟ ಪಂಡಗದ ಜಾತಿ ಪ್ರಮಾಣ ಪತ್ರವನ್ನು ನೀಡದೆ ಅನಾನುಕೂಲವಾಗಿರುತ್ತದೆ ಹಾಗೂ 1984ನೇ ನವೆಂಬರ್‌ನಲ್ಲಿ ಪರಿವಾರ ಮತ್ತು ತಳವಾರ ಜನಾಂಗದವರನ್ನು ಪರಿಶಿಷ್ಟ ವರ್ಗ ಜಾತಿಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸು ಮಾಡಿದ್ದು, ಸರ್ಕಾರದವರು ಆ ಬಗ್ಗೆ ಒತ್ತಾಯ ಮಾಡದಿರುವುದರಿಂದ ಉಂಟಾದ ವಿಳಂಬದಿಂದಾಗಿ ಪರಿವಾರ ಜನಾಂಗದವರಿಗೆ ಜಾತಿ ಪ್ರಮಾಣ ಪತ್ರ ನೀಡುವಲ್ಲಿ ಉಂಟಾಗಿರುವ ತೊಂದರೆಯ ವಿಚಾರವನ್ನು ಸರ್ಕಾರದವರು ಮನಗೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಪರಿವಾರ ಜಾತಿಯ ಜನಾಂಗದವರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ) : ಅಧ್ಯಕ್ಷರೇ, ಕೇಂದ್ರ ಸರ್ಕಾರವು ದಿನಾಂಕ : 19-1-1991ರಲ್ಲಿ ಹೊರಡಿಸಿದ "The constitution (Sch. Tribes) orders (Amendment) ordinance, 1991".ರ ಪ್ರಕಾರ ನಾಯ್ಕ (Naik) ನಾಯಕ್ (Nayak) ಬೇಡ (Beda) ಬೇಡರ್ (Bedkar) ಮತ್ತು ವಾಲ್ಮೀಕಿ (Valmiki) ಜನಾಂಗಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ವಿಶೇಷಾಜ್ಞೆಯನ್ನು ದಿನಾಂಕ : 9-5-91ರ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇದಲ್ಲದೆ ಸರ್ಕಾರ ದಿನಾಂಕ : 28-6-91ರಂದು ಕ್ರಮ ಸಂಖ್ಯೆ: ಎಸ್‌ಡಬ್ಲ್ಯೂಎಲ್ 104 ಎಸ್‌ಎಡಿ 91ರಲ್ಲಿ ರಾಜ್ಯದ ಎಲ್ಲಾ ತಹಸೀಲ್ದಾರ್‌ರು, ಜಿಲ್ಲಾದಿಕಾರಿಗಳನ್ನೊಳಗೊಂಡಂತೆ ಎಲ್ಲಾ ಅಧಿಕಾರಿಗಳಿಗೆ ಒಂದು ಸುತ್ತೋಲೆ ಹೊರಡಿಸಿ ಈ ಮೇಲ್ಕಾಣಿಸಿದ ಜನಾಂಗಗಳಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡಬೇಕೆಂದು ಸೂಚನೆ ನೀಡಿದೆ.

ಪರಿವಾರ ಹಾಗೂ ತಳವಾದ ಜನಾಂಗಗಳನ್ನು ಕೇಂದ್ರ ಸರ್ಕಾರ ಇನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸದೇ ಇರುವುದರಿಂದ ಇವರಿಗೆ ಪರಿಶಿಷ್ಟ ಪಂಗಡ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ. ಪರಿವಾರ ಹಾಗೂ ತಳವಾರ